**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು**

**O.S.No.71/2016**

**ದಿನಾಂಕ 03.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿಯ ಹೆಸರು | : | ಎಸ್,ಗಂಗಾಧರಪ್ಪ | CW-1 |
| ತಂದೆಯ ಹೆಸರು | : | ಕೆ.ಎಂ.ಶಂಕರಪ್ಪ | |
| ವಯಸ್ಸು | : | 50 ವರ್ಷ | |
| ಉದ್ಯೋಗ | : | ತಾಲ್ಲೂಕು ಭೂ-ಮಾಪಕರು,<br>ಎನ್.ಆರ್,ಪುರ | |
| ವಾಸ | : | ಎನ್.ಆರ್,ಪುರ | |

**ಮುಖ್ಯ ವಿಚಾರಣೆಃ ನ್ಯಾಯಾಲಯದಿಂದಃ-**

ಕಡೂರಿನ 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದ ಆದೇಶದಂತೆ, ನಾನು ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸು ನೀಡಿದ್ದು, ನಂತರ ದಿನಾಂಕ 29.08.2023 ರಂದು ಸ್ಥಳಕ್ಕೆ ಭೇಟಿ ನೀಡಿ ಹಾಜರಿದ್ದ ವಾದಿ ಮತ್ತು 7 ನೇ ಪ್ರತಿವಾದಿಯ ಸಮಕ್ಷಮ ಕಡೂರು ತಾಲ್ಲೂಕು, ಚೌಳಹಿರಿಯೂರು ಹೋಬಳಿ, ಇ.ತಿಮ್ಮಾಪುರ ಗ್ರಾಮದ ಸರ್ವೆ ನಂ.1 ಮತ್ತು 2ರ ಜಮೀನನ್ನು ಮಾನ್ಯ ನ್ಯಾಯಾಲಯದ ಆದೇಶದಂತೆ ಮೂಲ ನಕ್ಷೆಯನ್ನು ಆಧರಿಸಿ ಸರ್ವೆ ನಂ.1 ಮತ್ತು 2ರ ಗಡಿರೇಖೆಗಳನ್ನು ಗುರುತಿಸಿ, ಸ್ಥಳದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿ, ಮಹಜರು ಮಾಡಿ, ಕಛೇರಿಯಲ್ಲಿ ನಕ್ಷೆಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸರ್ವೆ ನಂ.1 ಮತ್ತು 2 ನ್ನು ಅಳತೆ ಮಾಡಿದಾಗ, ಸರ್ವೆ ನಂ.2 ವಾದಿಯ ಜಮೀನು 1 ಎಕರೆ 35 ಗುಂಟೆ ಇದ್ದು, ಸದರಿ ಜಮೀನಿನ ಉತ್ತರ ಭಾಗದಲ್ಲಿ 11 ಗುಂಟೆ ಪ್ರದೇಶವನ್ನು 7 ನೇ ಪ್ರತಿವಾದಿಯು ಒತ್ತುವರಿ ಮಾಡಿರುವುದು ಕಂಡುಬಂದಿರುತ್ತದೆ. ವಾದಿಗೆ ಸೇರಿದ ಸದರಿ ಒತ್ತುವರಿ ಪ್ರದೇಶದಲ್ಲಿ ಸುಮಾರು 30-40 ವರ್ಷದ ಒಂದು ಹುಣಸೆ ಮರ, ಸುಮಾರು 70 ಅಡಿ ಉದ್ದದ 04 ಅಡಿ ಎತ್ತರದ ಹಳೇ ಕಲ್ಲಿನ ಕಟ್ಟಡ ಮತ್ತು ಖಾಲಿ ಜಾಗ 7 ನೇ ಪ್ರತಿವಾದಿ ಒತ್ತುವರಿ ಮಾಡಿದ ಪ್ರದೇಶದಲ್ಲಿ ಇರುತ್ತದೆ ಎಂದು ನಾನು

ನನ್ನ ಅಳತೆ ಕಾರ್ಯದಲ್ಲಿ ಕಂಡುಬಂದಿದ್ದು, ಸದರಿ ವಿಚಾರಗಳನ್ನು ನನ್ನ ನಕ್ಷೆಯಲ್ಲಿ ವಿವರಿಸಿರುತ್ತೇನೆ.

ಸರ್ವೆ ನಂ.1 ರಲ್ಲಿ ಎಲ್ಲಾ ಪ್ರತಿವಾದಿಗಳಿಗೆ ಸೇರಿದ ಜಮೀನನ್ನು ಅಳತೆ ಮಾಡಿರುತ್ತೇನೆ. ಸರ್ವೆ ನಂ.1 ರಲ್ಲಿ ಪ್ರತಿವಾದಿಗಳಿಗೆ ಸೇರಿದ ಜಮೀನು ಒಟ್ಟು 11 ಎಕರೆ 16 ಗುಂಟೆ ಇದ್ದು, ಅದರಲ್ಲಿ 13 ಗುಂಟೆ ಖರಾಬು ಇದ್ದು ಅದನ್ನು ಕಳೆದು 11 ಎಕರೆ 03 ಗುಂಟೆ ಇರುತ್ತದೆ. ಆಕಾರ್ ಬಂದಿನಂತೆ ಸರ್ವೆ ನಂ.1 ರಲ್ಲಿ 5 ಹಿಸ್ಸೆಗಳಾಗಿದ್ದು, ಸದರಿ 5 ಹಿಸ್ಸೆಗಳನ್ನು ಅಳತೆ ಮಾಡಿದಾಗ ಪ್ರತಿವಾದಿಗಳಿಗೆ ಸೇರಿದ ಜಮೀನು ಯಾವುದೇ ಒತ್ತುವರಿಯಾಗಿಲ್ಲದಿರುವುದು ಕಂಡುಬಂದಿರುತ್ತದೆ. ಆದರೆ 7 ನೇ ಪ್ರತಿವಾದಿಗೆ ಸೇರಿದ ಸರ್ವೆ ನಂ.1/1 ರಲ್ಲಿ ಆರ್.ಟಿ.ಸಿ.ಯಂತೆ 2 ಎಕರೆ 25 ಗುಂಟೆ ಇದ್ದು, ಅದರಲ್ಲಿ 4 ಗುಂಟೆ ಖರಾಬು ಕಳೆದು 2 ಎಕರೆ 21 ಗುಂಟೆ ಇರಬೇಕಿತ್ತು. ಆದರೆ ಸದರಿ ಹಾಲಿ ಸ್ವಾಧೀನದಲ್ಲಿ 7 ನೇ ಪ್ರತಿವಾದಿಯು ಸರ್ವೆ ನಂ.1/1 ರಲ್ಲಿ 2 ಎಕರೆ 36 ಗುಂಟೆ ಜಮೀನಿನಲ್ಲಿ 4 ಗುಂಟೆ ಖರಾಬು ಕಳೆದು 2 ಎಕರೆ 32 ಗುಂಟೆ 7 ನೇ ಪ್ರತಿವಾದಿಯು ಸ್ವಾಧೀನಾನುಭವದಲ್ಲಿ ಇರುವುದು ಕಂಡುಬಂದಿರುತ್ತದೆ. ಅಂದರೆ ವಾದಿಗೆ ಸೇರಿದ ಸರ್ವೆ ನಂ.2 ರಲ್ಲಿ 11 ಗುಂಟೆ ಜಮೀನನ್ನು 7 ನೇ ಪ್ರತಿವಾದಿಯು ಒತ್ತುವರಿ ಮಾಡಿರುವುದು ನನ್ನ ಅಳತೆ ಕಾರ್ಯದಿಂದ ಕಂಡುಬಂದಿರುತ್ತದೆ.

ಸಾಕ್ಷಿಯು ನೋಟೀಸನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಎಂದು ಅದರಲ್ಲಿರುವ ತನ್ನ ಸಹಿಯನ್ನು ನಿಪಿ.1 ಎ ಎಂದು, 08 ಅಂಚೆ ರಶೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ.2 ಎಂದು, ಮಹಜರನ್ನು ಹಾಜರುಪಡಿಸಿದ್ದು ಅದನ್ನು ನಿಪಿ.3 ಎಂದು, ಸ್ಥಳದಲ್ಲಿ ತಯಾರಿಸಿದ ಕಚ್ಚಾ ನಕ್ಷೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ.4 ಎಂದು, ವಾದಿ ಮತ್ತು ಪ್ರತಿವಾದಿಗಳ ಪ್ರಶ್ನಾವಳಿಗಳಿಗೆ ಉತ್ತರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ.5 ಮತ್ತು 6 ಎಂದು, ಕಛೇರಿಯಲ್ಲಿ ತಯಾರಿಸಿದ ನಕ್ಷೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ.7 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 7 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲವಕಾಶವನ್ನು ಕೋರಿದ್ದು ಕಾಲವಕಾಶನ್ನು ನೀಡಿ ಮುಂದೂಡಲಾಯಿತು.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ.ದಂ.,ರವರು, ಕಡೂರು.